SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 39-43
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಹಾಲು ಉತ್ಪಾದಕರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಸಕಲೇಶಪುರ ತಾಲೂಕಿಗೆ ಸಂಬಂಧಿಸಿದಂತೆ)

**ಡಾ. ಸುರೇಶ ಸಿ***
*ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು – ಸ್ವಾಯತ್ತ, ಹಾಸನ

***Abstract:***
ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ರಾಷ್ಟ್ರದ ಆಥಿಕತೆಯಲ್ಲಿ ಕೃಷಿಯ ಪಾತ್ರ ಗಣನೀಯವಾಗಿದ್ದು ಅನಾದಿ ಕಾಲದಿಂದಲೂ ಕೃಷಿ ಮತ್ತು ಪಶುಸಂಗೋಪನೆ ಚಟುವಟಿಕೆಗಳು ಒಂದೇ ನಾಣ್ಯದ ಎರಡು ಮುಖಗಳಂತಿದ್ದು ಗ್ರಾಮೀಣ ಜನ ಜೀವನಕ್ಕೆ ಆರ್ಥಿಕ ಭದ್ರತೆ ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಹಾಗೂ ಭಾರತ ಪ್ರಮುಖವಾಗಿ ಹಳ್ಳಿಗಳ ರಾಷ್ಟ್ರ. ಹಳ್ಳಿಗಳೆ ಭಾರತದ ಬೆನ್ನೆಲುಬು, ರಾಷ್ಟ್ರದ ಶೇಕಡ 75 ರಿಂದ 80 ರಷ್ಟು ಜನ ಹಳ್ಳಿಗಳಲ್ಲೆ ವಾಸಿಸುತ್ತಿದ್ದಾರೆ ಇವರಲ್ಲಿ ಬಹಳಷ್ಟು ಜನ ಸಣ್ಣ ರೈತರು, ಅತಿ ಸಣ್ಣ ರೈತರು ಹಾಗೂ ಕೃಷಿ ಕಾರ್ಮಿಕರು ಅವರಿಗೆ ಇರುವ ಭೂಹಿಡುವಳಿ ಸರಾಸರಿ 2 ಅಥವಾ 3 ಎಕರೆಗೂ ಕಡಿಮೆ. ಇವರು ವ್ಯವಸಾಯವನ್ನೆ ತಮ್ಮ ಜೀವನಾಧಾರವನ್ನಾಗಿ ಅವಲಂಬಿಸಿದ್ದಾರೆ. ಗ್ರಾಮೀಣ ಜನತೆಯ ಪ್ರಮುಖ ಉದ್ಯೋಗ ವ್ಯವಸಾಯದ ಜೊತೆಗೆ ವ್ಯವಸಾಯ ಅವಲಂಬಿತ ಚಟುವಟಿಕೆಗಳಲ್ಲಿಯೂ ತೊಡಗಿಕೊಂಡಿರುವುದು ಕಂಡುಬರುತ್ತದೆ.

***Key Words:*** ಕೃಷಿ, ಗ್ರಾಮೀಣ ಆರ್ಥಿಕತೆ, ಪಶುಸಂಗೋಪನೆ, ಹೈನುಗಾರಿಕೆ, ಹಾಲು ಉತ್ಪದಾನೆ.

## ಪೀಠಿಕೆ

ಇತ್ತೀಚೆಗೆ ಪ್ರಕೃತಿಯು ಮಾನವನ ಉಪಟಳಕ್ಕೆ ಒಳಗಾಗಿ ವಿನಾಶದ ಹಂತಕ್ಕೆ ತಲುಪುತ್ತಿದೆ. ಸ್ವೇಚ್ಛಾಚಾರ ಪ್ರವೃತ್ತಿಯ ಮಾನವ ತನ್ನ ಆಗುಹೋಗುಗಳನ್ನು ಪೂರೈಸಲು ಪ್ರಕೃತಿಯಲ್ಲಿನ ಹೇರಳ ಸಂಪತ್ತನ್ನು ಅನಾವಶ್ಯಕವಾಗಿ ಹಾಳು ಮಾಡುತ್ತಿದ್ದಾನೆ. ಹಲವಾರು ವೇಳೆ ವೈಪರಿತ್ಯಗಳಿಂದ ರೈತರು ಬಿತ್ತಿದಷ್ಟನ್ನು ಹಿಂತಿರುಗಿ ಪಡೆಯಲು ಸಾಧ್ಯವಾಗುತ್ತಿಲ್ಲ ಇಂತಹ ಪರಿಸ್ಥಿತಿಗಳಲ್ಲಿ ರೈತರು ಕೃಷಿಯ ಜೊತೆಗೆ ಕೃಷಿಗೆ ಪೂರಕವಾದ ಪಶುಸಂಗೋಪನೆಯನ್ನು ಕೈಗೊಳ್ಳುವುದರಿಂದ ಅವರ ಜೀವನ ಮಟ್ಟವನ್ನು ಸುಧಾರಿಸಿಕೊಂಡು ನೆಮ್ಮದಿಯ ಬಾಳ್ವೆಯನ್ನು ನಡೆಸಬಹುದಾಗಿದೆ. ಪ್ರಾಣಿಗಳನ್ನು ಕ್ಷೀರೋಧ್ಯಮ ಹಾಗೂ ಇತರೆ ಹಲವು ಉದ್ದೇಶಗಳಿಗಾಗಿ ಪೋಷಿಸುವುದನ್ನು ಪಶುಸಂಗೋಪನೆ ಎಂದು ಕರೆಯಲಾಗಿದ್ದು ಇದು ಪುರಾತನ ಆರ್ಥಿಕ ವೃತ್ತಿಗಳಲ್ಲಿ ಒಂದಾಗಿದೆ. ಇದು ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಎಲ್ಲಾ ಆರ್ಥಿಕತೆಗಳಲ್ಲಿ ರೂಢಿಗೆ ಬಂದಿದೆ. ಜಗತ್ತಿನ ವಿವಿಧ ಪ್ರದೇಶಗಳಲ್ಲಿ ವಿವಿಧ ಬಗೆಯ ಪ್ರಾಣಿಗಳನ್ನು ವಿವಿಧ ಬಗೆಯ ಪರಿಸರಗಳಲ್ಲಿ ಸಾಕುತ್ತಿರುವುದಲ್ಲದೆ ಪಶುಸಂಗೋಪನೆಯು ಜೀವನಾಧಾರ ಹಾಗೂ ವಾಣಿಜ್ಯ ಮಾದರಿ ಹೀಗೆ ಎರಡು ಹಂತಗಳಲ್ಲಿಯೂ ನಿರ್ವಹಿಸಲ್ಪಡುವ ಉದ್ಯೋಗವಾಗಿದೆ. ಇದರಿಂದ ವ್ಯವಸಾಯಕ್ಕಿಂತಲೂ ಪಶುಸಂಗೋಪನೆಯು ವಿಸ್ತಾರವಾದ ಪ್ರದೇಶದಲ್ಲಿ ಕಂಡುಬರುತ್ತದೆ.

## ಅಧ್ಯಯನದ ಪ್ರಾಮುಖ್ಯತೆ

ರೈತರಿಗೆ ಹಾಗೂ ರೈತ ಕಾರ್ಮಿಕರುಗಳಿಗೆ ಸಂಬಂಧಿಸಿದಂತೆ ಅದರಲ್ಲಿಯೂ ಹಾಲು ಉತ್ಪಾದಕರಿಗೆ ಸಂಬಂಧಿಸಿದಂತೆ ಅಧ್ಯಯನಗಳು ಹಲವು ಕ್ಷೇತ್ರಗಳಲ್ಲಿ ನಡೆಯುತ್ತಿದ್ದರೂ ಇನ್ನೂ ಅಧ್ಯಯನವಾಗಬೇಕಾಗಿರುವ

*Please cite this article as:* ಸುರೇಶ ಸಿ. (2022). ಹಾಲು ಉತ್ಪಾದಕರು : ಒಂದು ಸಮಾಜಶಾಸ್ತ್ರೀಯ ಅಧ್ಯಯನ (ವಿಶೇಷವಾಗಿ ಸಕಲೇಶಪುರ ತಾಲೂಕಿಗೆ ಸಂಬಂಧಿಸಿದಂತೆ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 39–43.

ಅನೇಕ ಕ್ಷೇತ್ರಗಳು ಉಳಿದಿವೆ. ಹಾಲು ಉತ್ಪಾದಕರನ್ನು ಕುರಿತಂತೆ ಅಧ್ಯಯನಗಳು ನಡೆಯಬೇಕಿದೆ. ಹಾಲು ಉತ್ಪಾದಕರು ಸಾಮಾಜಿಕವಾಗಿ, ಹಾಲು ಕೊಳ್ಳುವವರಿಂದ, ಡೈರಿಯವರಿಂದ, ವೈದ್ಯಕೀಯವಾಗಿ ಮತ್ತು ಹವಾಗುಣ ವೈಪರೀತ್ಯದಿಂದ ದೌರ್ಜನ್ಯಕ್ಕೊಳಗಾಗುತ್ತಿರುವುದನ್ನು ಕಾಣಬಹುದಾಗಿದೆ. ಅಂತಹ ಕ್ಷೇತ್ರಗಳಲ್ಲಿ ಹಾಲು ಉತ್ಪಾದಕ ರೈತರು ಸಹ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇವರುಗಳ ಸಮಸ್ಯೆಗಳನ್ನು ಪತ್ತೆಹಚ್ಚಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಸಹಕಾರಿಯಾಗಲಿದೆ.

**ಅಧ್ಯಯನದ ಉದ್ದೇಶಗಳು**

- ಹಾಲು ಉತ್ಪಾದಕ ರೈತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅವಲೋಕಿಸುವುದು
- ಹಾಲು ಉತ್ಪಾದಕ ರೈತರ ಕೌಟುಂಬಿಕ ಹಿನ್ನೆಲೆಯನ್ನು ತಿಳಿಯುವುದು
- ಹಾಲು ಉತ್ಪಾದಕ ಸಂಘದಿಂದ ಹಾಲು ಉತ್ಪಾದಕರಿಗೆ ಇರುವಂತಹ ಸಹಕಾರಿ ಸೌಲಭ್ಯಗಳನ್ನು ಪತ್ತೆಹಚ್ಚುವುದು
- ಹಾಲು ಉತ್ಪಾದನೆ ಎಂಬುದು ರೈತರ ಒಂದು ಉದ್ಯಮವಾಗಿದೆಯೇ ಎನ್ನುವುದನ್ನು ಅರಿಯುವುದು

**ಅಧ್ಯಯನ ಕಾರ್ಯ ಕ್ಷೇತ್ರದ ವ್ಯಾಪ್ತಿ**

ಪ್ರಸ್ತುತ ಅಧ್ಯಯನಕ್ಕೆ ಸಕಲೇಶಪುರವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸಕಲೇಶಪುರವು ಹಾಸನ ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದಾಗಿದೆ. ಇದು ಮಲೆನಾಡು ಪ್ರದೇಶವಾಗಿದೆ. ಜೀವವೈವಿಧ್ಯತೆಯ ಕೇಂದ್ರವೂ ಆಗಿದೆ. ಇದು ಹಸಿರು ಬೆಟ್ಟಗಳ ನಡುವೆ ಕಾಫಿ, ಏಲಕ್ಕಿ, ಮೆಣಸು, ಅಡಕೆ, ತೆಂಗು, ಬಾಳೆಯ ತೋಟಗಳಿಂದ ಆವೃತವಾಗಿದ್ದು ಸಮಶೀತೋಷ್ಣ ಹವಾಮಾನವನ್ನು ಹೊಂದಿದೆ. ಕೃಷಿಯ ಜೊತೆಯಲ್ಲಿ ಹೈನುಗಾರಿಕೆಯನ್ನು ಕಸುಬನ್ನಾಗಿ ಮಾಡಿಕೊಂಡಿರುವವರ ಇದ್ದಾರೆ. 2011 ರ ಜನಗಣತಿಯ ಪ್ರಕಾರ ಸಕಲೇಶಪುರವು 128,633 ಪುರುಷರು 63,126 ಮತ್ತು ಮಹಿಳೆಯರು 65,507 ಇದ್ದಾರೆ.

**ಸಂಶೋಧನಾ ವಿಧಾನ**

ಹಾಸನ ಜಿಲ್ಲೆ, ಸಕಲೇಶಪುರ ತಾಲ್ಲೂಕಿನಲ್ಲಿ ಹಾಲು ಉತ್ಪಾದಕರು ಇಡೀ ತಾಲ್ಲೂಕಿನಾದ್ಯಂತ ಕಂಡುಬರುತ್ತಾರೆ ಅವರಲ್ಲಿ 50 ಜನ ಹಾಲು ಉತ್ಪಾದಕರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಸಂದರ್ಶನ ಅನುಸೂಚಿಯ ಸಹಾಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

**ಫಲಿತಾಂಶ ಮತ್ತು ಚರ್ಚೆಗಳು**

ಹಾಲು ಉತ್ಪಾದನೆಯು ಗ್ರಾಮೀಣ ಜನ ಜೀವನದ ಪ್ರಮುಖ ಭಾಗವಾಗಿದ್ದು, ಕೃಷಿ ಚಟುವಟಿಕೆಯಲ್ಲಿ ತೊಡಗಿರುವವರು ಹಸು ಸಾಕಾಣಿಕೆಯನ್ನು ಪೂರಕ ವೃತ್ತಿಯನ್ನಾಗಿಸಿಕೊಂಡಿದ್ದರೆ, ಭೂರಹಿತರು ಪ್ರಮುಖ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇದ್ದರಿಂದ ಗ್ರಾಮೀಣ ಆರ್ಥಿಕತೆಯಲ್ಲಿ ಹಾಲು ಉತ್ಪಾದನೆಯು ಪ್ರಮುಖವಾದ ಅಂಗವಾಗಿದೆ.

**ಹಾಲು ಉತ್ಪಾದಕರ ವಯಸ್ಸು**

ವ್ಯಕ್ತಿಯು ಹುಟ್ಟಿದಾಗಿನಿಂದ ಸಾಯುವ ವರೆಗಿನ ನಡುವಿನ ಕಾಲಾವಧಿಯನ್ನೇ ವಯಸ್ಸು ಎಂಬುದಾಗಿ ಸೂಚಿಸುತ್ತದೆ. ಹಾಲು ಉತ್ಪಾದನೆಯಲ್ಲಿ ಗ್ರಾಮೀಣ ಪ್ರದೇಶದ ರೈತರ ಪಾತ್ರ ಮಹತ್ವದ್ದಾಗಿದೆ.

**ಕೋಷ್ಟಕ 1: ಹಾಲು ಉತ್ಪಾದಕರ ವಯಸ್ಸಿನ ವಿವರ**

| ವಯಸ್ಸು | ಆವೃತ್ತಿ | ಶೇಕಡವಾರು |
|---|---|---|
| 25–35 | 10 | 20% |
| 36–45 | 16 | 32% |
| 46–55 | 14 | 28% |
| 56–65 | 08 | 16% |
| 66–70 | 02 | 04% |
| **ಒಟ್ಟು** | **50** | **100%** |

ಮೂಲ: ಕ್ಷೇತ್ರಕಾರ್ಯ

ಕೋಷ್ಟಕ 1 ರಲ್ಲಿ ಹಾಲು ಉತ್ಪಾದಕರ ವಯಸ್ಸಿನ ವಿವರವನ್ನು ನೀಡಲಾಗಿದೆ. ಮೇಲಿನ ಕೋಷ್ಟಕದಿಂದ ಕಂಡುಬರುವುದೆನೆಂದರೆ ಯುವ ಸಮುದಾಯದವರು ಮಾತ್ರವಲ್ಲದೆ ಮಧ್ಯವಯಸ್ಸಿನವರು ಮತ್ತು ವೃದ್ಧರು ಕೂಡ ಹಾಲು ಉತ್ಪಾದನೆಯಲ್ಲಿ ತೊಡಗಿದ್ದಾರೆ. ವಯೋಮಾನವಾರು ನೋಡಿದಾಗ 25–35 ವಯಸ್ಸಿನವರು 20%ರಷ್ಟು ಇದ್ದಾರೆ, 36–45 ವಯಸ್ಸಿನವರು 32% ರಷ್ಟು ಇದ್ದಾರೆ, 46–55 ವಯಸ್ಸಿನವರು 28%ರಷ್ಟು ಇದ್ದಾರೆ, 56–65 ವಯಸ್ಸಿನವರು 16% ರಷ್ಟು, 66–70 04% ಇದ್ದಾರೆ ಇದರಲ್ಲಿ 36 ರಿಂದ 45 ವರ್ಷ ವಯಸ್ಸಿನವರ ಪ್ರಮಾಣ ಹೆಚ್ಚಾಗಿರುವುದು ಅಧಿಕವಾಗಿದೆ. ಇದನ್ನು ನೋಡಿದಾಗ ಮಧ್ಯಸ್ಥ ವಯಸ್ಸಿನವರು ಹೆಚ್ಚಾಗಿದ್ದು ಮಧ್ಯಸ್ಥ ವಯಸ್ಸಿನವರಿಗೆ ದುಡಿಮೆಯ ಅಗತ್ಯತೆ ಇದೆ ಎನ್ನುವುದು ಇಲ್ಲಿ ಕಂಡುಬಂದಿದೆ.

**ಹಾಲು ಉತ್ಪಾದಕರ ಶೈಕ್ಷಣಿಕ ಮಟ್ಟ**

ಶಿಕ್ಷಣವು ವ್ಯಕ್ತಿಯ ಜ್ಞಾನವನ್ನು ಹೆಚ್ಚಿಸುತ್ತದೆ. ಶಿಕ್ಷಣವು ವ್ಯಕ್ತಿಯ ಉದ್ಯೋಗ ಆರ್ಥಿಕ ಸ್ಥಾನಮಾನಗಳನ್ನು ನಿರ್ಧರಿಸುತ್ತದೆ. ಉತ್ತಮ ಜೀವನಕ್ಕೆ ಶಿಕ್ಷಣವೇ ಸಾಧನ.

ಶೈಕ್ಷಣಿಕ ಮಟ್ಟವನ್ನು ಈ ಕೆಳಗಿನ ಕೋಷ್ಟಕದಲ್ಲಿ ಕಾಣಬಹುದು.

**ಕೋಷ್ಟಕ 2: ಹಾಲು ಉತ್ಪಾದಕರ ಶಿಕ್ಷಣದ ವಿವರ**

| ಶಿಕ್ಷಣ | ಆವೃತ್ತಿ | ಶೇಕಡವಾರು |
|---|---|---|
| ಪ್ರಾಥಮಿಕ | 18 | 36% |
| ಪ್ರೌಢ ಶಾಲೆ | 12 | 24% |
| ಪದವಿ ಪೂರ್ವ | 08 | 16% |
| ಪದವಿ | 02 | 04% |
| ಅನಕ್ಷರಸ್ಥರು | 10 | 20% |
| **ಒಟ್ಟು** | **50** | **100%** |

**ಮೂಲ: ಕ್ಷೇತ್ರಕಾರ್ಯ**

ಮೇಲಿನ ಕೋಷ್ಟಕದಲ್ಲಿ ಹಾಲು ಉತ್ಪಾದಕರ ವಯಸ್ಸಿನ ವಿವರವನ್ನು ನೀಡಲಾಗಿದೆ. ಹಿಂದೆ ಹೆಚ್ಚಿನ ಪ್ರಮಾಣದಲ್ಲಿ ಅನಕ್ಷರಸ್ಥರು ಪಶುಸಂಗೋಪನೆಯಲ್ಲಿ ತೊಡಗಿಕೊಳ್ಳುತ್ತಿದ್ದರು. ಆದರೆ ಇಂದು ಅಕ್ಷರಸ್ಥರೂ ಕೂಡ ಹೆಚ್ಚಿನ ಪ್ರಮಾಣದ ಹಾಲು ಉತ್ಪಾದನೆಯಲ್ಲಿ ತೊಡಗಿಕೊಂಡಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ. ಹಾಲು ಉತ್ಪಾದಕರ ಶಿಕ್ಷಣವನ್ನು ನೋಡಿದಾಗ ಪ್ರಾಥಮಿಕ ಶಿಕ್ಷಣವನ್ನು 36%, ಪ್ರೌಢ ಶಾಲೆ 24%, ಪದವಿ ಪೂರ್ವ 16%, ಪದವಿ 04%, ಅನಕ್ಷರಸ್ಥರು 20% ಇದ್ದಾರೆ ಇವರಲ್ಲಿ ಶಿಕ್ಷಣ ಪಡೆದಿರುವವರು ಮತ್ತು ಅನಕ್ಷರಸ್ಥರು ಇಬ್ಬರು ಇರುವುದರಿಂದ ಹಾಲು ಉತ್ಪಾದನೆ ಮಾಡುವಲ್ಲಿ ಶಿಕ್ಷಣ ಪಡೆದಿರುವವರು ಹೆಚ್ಚಾಗಿರುವುದು ಕಂಡುಬರುತ್ತದೆ.

**ಹಾಲು ಉತ್ಪಾದಕರ ಸಾಗುವಳಿ ಭೂಮಿ**

ನಿರ್ಧಿಷ್ಟ ಭೂ ಪ್ರದೇಶದಲ್ಲಿ ಸರ್ಕಾರಿ ಸ್ವಾಮ್ಯದ ಒಡೆತನದಲ್ಲಿ ರೈತರು ಉಳುಮೆ ಮಾಡುತ್ತಿರುವ ಭೂಮಿಯನ್ನು ಸಾಗುವಳಿ ಭೂಮಿ ಎಂದು ಕರೆಯುತ್ತೇವೆ. ಭಾರತವು ಕೃಷಿಯ ಪ್ರಧಾನವಾದ ಕಸುಬಾಗಿ ಕಂಡುಬಂದಿದ್ದು ಸಾಗುವಳಿ ಭೂಮಿಯ ಎಕರೆವಾರು ಹಂಚಿಕೆಯು ಈ ಕೆಳಗಿನಂತೆ ಕಾಣಬಹುದು.

**ಕೋಷ್ಟಕ 3: ಹಾಲು ಉತ್ಪಾದಕರ ಸಾಗುವಳಿ ಭೂಮಿಯ ವಿವರ**

| ಸಾಗುವಳಿ ಭೂಮಿ | ಆವೃತ್ತಿ | ಶೇಕಡವಾರು |
|---|---|---|
| 1–3 | 23 | 46% |
| 4–6 | 10 | 20% |
| 7–9 | 10 | 20% |
| 10–12 | 07 | 14% |
| **ಒಟ್ಟು** | **50** | **100%** |

**ಮೂಲ: ಕ್ಷೇತ್ರಕಾರ್ಯ**

ಮೇಲಿನ ಕೋಷ್ಟಕದಿಂದ ತಿಳಿದುಬರುವುದೆನೆಂದರೆ ಹಾಲು ಉತ್ಪಾದಕರ ಸಾಗುವಳಿ ಭೂಮಿಯ ಪ್ರಮಾಣವನ್ನು ನೋಡಿದಾಗ 1–3 ಎಕರೆ 26%, 4–6 ಎಕರೆ 20%, 7–9 ಎಕರೆ 20%, 10–12 ಎಕರೆ 14% ಇದೆ. 1 ರಿಂದ 3 ಎಕರೆ ಸಾಗುವಳಿ ಭೂಮಿ ಇರುವವರು ಹೆಚ್ಚಿನದಾಗಿದ್ದಾರೆ ಇದನ್ನು ನೋಡಿದಾಗ ಕಡಿಮೆ ಭೂಮಿ ಇರುವವರು ಹಾಲು ಉತ್ಪಾದನೆಯಲ್ಲಿ ತೊಡಗಿರುವುದು ಜೀವನದ ಅವಶ್ಯಕತೆಯನ್ನು ತಿಳಿಸುತ್ತದೆ.

**ಹಾಲು ಉತ್ಪಾದಕರ ವಾರ್ಷಿಕ ಆದಾಯ**

ಒಂದು ವರ್ಷದಲ್ಲಿ ಬರುವಂತಹ ಆದಾಯಕ್ಕೆ ವಾರ್ಷಿಕ ಆದಾಯ ಎಂದು ಕರೆಯುತ್ತೇವೆ. ವ್ಯಕ್ತಿಯೊಬ್ಬರು ತಾವು ಮಾಡುವ ಕೆಲಸದಿಂದ ಗಳಿಸುವ ಹಣ ಮತ್ತು ಅದರ ರೂಪದಲ್ಲಿ ಬರುವ ಇತರೆ ಯಾವುದೇ ಆದರೂ ಅದು ಆದಾಯ ಎನಿಸಿಕೊಳ್ಳುತ್ತದೆ.

**ಕೋಷ್ಟಕ 4: ಹಾಲು ಉತ್ಪಾದಕರ ವಾರ್ಷಿಕ ಆದಾಯದ ವಿವರ**

| ವಾರ್ಷಿಕ ಆದಾಯ | ಆವೃತ್ತಿ | ಶೇಕಡವಾರು |
|---|---|---|
| 10000–25000 | 12 | 24% |
| 25001–40000 | 20 | 40% |
| 40001–55000 | 09 | 18% |
| 55001–70000 | 09 | 18% |
| **ಒಟ್ಟು** | **50** | **100%** |

**ಮೂಲ: ಕ್ಷೇತ್ರಕಾರ್ಯ**

ಮೇಲಿನ ಕೋಷ್ಟಕದಿಂದ ತಿಳಿದುಬರುವುದೆನೆಂದರೆ ಹಾಲು ಉತ್ಪಾದಕರ ವಾರ್ಷಿಕ ಆದಾಯದ ವಿವರವನ್ನು ನೋಡಿದಾಗ 10000–25000 24%, 25001–40000 40%, 40001–55000 18%, 55001–70000 18% ಇದೆ. 25001–40000 40% ಹೆಚ್ಚಾಗಿ ಇರುವುದು ಅಧ್ಯಯನದಿಂದ ಕಂಡುಬರುತ್ತದೆ. ಇಲ್ಲಿ ಹಸುಗಳ ನಿರ್ವಹಣೆ ವೆಚ್ಚ ಅಧಿಕವಾಗಿರುವುದರಿಂದ ಆದಾಯವು ವೆಚ್ಚವಾಗಿ ಪರಿವರ್ತನೆಯಾಗುತ್ತದೆ ಎನ್ನುವುದು ಇಲ್ಲದೆ. ವಾರ್ಷಿಕವಾಗಿ ಹಾಲು ಉತ್ಪಾದಕರ ಆದಾಯದಿಂದ ಅವರ ಜೀವನ ಮಟ್ಟ ಉತ್ತಮವಾಗಿರುವುದು ಕಂಡುಬರುತ್ತದೆ.

**ಹಾಲು ಉತ್ಪಾದಕರ ಉಳಿತಾಯ**

ಉಳಿತಾಯ ಪ್ರತಿಯೊಂದು ಜೀವಿಯು ಒಂದಲ್ಲ ಒಂದು ರೀತಿಯಲ್ಲಿ ಮಾಡುತ್ತಿರುತ್ತದೆ ಅದು ಹಣ ಅಥವಾ ಆಹಾರ ಹೀಗೆ ಯಾವುದಾದರು ಒಂದು ಇರುತ್ತದೆ. ಹಾಲು ಉತ್ಪಾದಕರು ತಮ್ಮ ಮುಂದಿನ ಜೀವನಕ್ಕಾಗಿ ಉಳಿತಾಯವನ್ನು ಮಾಡುತ್ತಿರುವುದನ್ನು ನಾವು ನೋಡಬಹುದು.

**ಕೋಷ್ಟಕ 5: ಹಾಲು ಉತ್ಪಾದಕರ ಉಳಿತಾಯದ ವಿವರ**

| ಉಳಿತಾಯದ ವಿಧಾನ | ಆವೃತ್ತಿ | ಶೇಕಡವಾರು |
|---|---|---|
| ಅಂಚೆ ಕಛೇರಿ | 06 | 12% |
| ಸ್ವ–ಸಹಾಯ ಸಂಘ | 25 | 50% |
| ಬ್ಯಾಂಕ್ | 15 | 30% |
| ಇತರೆ | 04 | 08% |
| **ಒಟ್ಟು** | **50** | **100%** |

**ಮೂಲ: ಕ್ಷೇತ್ರಕಾರ್ಯ**

ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಹಾಲು ಉತ್ಪಾದಕರ ಉಳಿತಾಯದ ವಿವರವನ್ನು ನೋಡಿದಾಗ ಅಂಚೆ ಕಛೇರಿ ಎಂದು 12%, ಸ್ವ-ಸಹಾಯ ಸಂಘ 50%, ಬ್ಯಾಂಕ್ 30%, ಇತರೆ 08% ಎಂದು ತಿಳಿಸಿದ್ದಾರೆ. ಇದರಲ್ಲಿ ಸ-ಸಹಾಯ ಸಂಘದಲ್ಲಿ ಉಳಿತಾಯ ಮಾಡಿರುವವರು ಹೆಚ್ಚಾಗಿದ್ದಾರೆ ಹಾಗೂ ಬ್ಯಾಂಕ್‌ಗಳಲ್ಲಿಯೂ ಕೆಲವರು ಉಳಿತಾಯ ಮಾಡಿರುವುದು ಕಂಡುಬರುತ್ತದೆ.

**ಹಾಲಿನ ಡೈರಿಯ ಕುರಿತು ಇರುವ ಅಭಿಪ್ರಾಯ**

ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನರು ತಮ್ಮ ವ್ಯವಹಾರಕ್ಕಾಗಿ ಮತ್ತು ಹಣದ ಉಳಿತಾಯದ ಮನೋಭಾವನೆಯ ದೃಷ್ಟಿಯಿಂದ ಪ್ರತಿಯೊಬ್ಬರೂ ನಿರಂತರವಾಗಿ ಹಾಲನ್ನು ಮಾರಾಟ ಮಾಡುವ ಸ್ಥಳಕ್ಕೆ ಡೈರಿ ಎಂದು ಕರೆಯುತ್ತೇವೆ.

**ಕೋಷ್ಟಕ 6: ಡೈರಿಯ ಬಗೆಗೆ ಹಾಲು ಉತ್ಪಾದಕರ ಅಭಿಪ್ರಾಯ**

| ಡೈರಿಯ ಅಭಿಪ್ರಾಯ | ಆವೃತ್ತಿ | ಶೇಕಡವಾರು |
|---|---|---|
| ಉತ್ತಮ | 48 | 96% |
| ಸಾಧಾರಣ | 02 | 04% |
| ಕಳಪೆ | 00 | 00% |
| **ಒಟ್ಟು** | **50** | **100%** |

ಮೂಲ: ಕ್ಷೇತ್ರಕಾರ್ಯ

ಮೇಲಿನ ಕೋಷ್ಟಕದಲ್ಲಿ ಡೈರಿಯ ಬಗೆಗೆ ಹಾಲು ಉತ್ಪಾದಕರ ಅಭಿಪ್ರಾಯ ಕೇಳಿದಾಗ ಉತ್ತಮವಾಗಿದೆ ಎಂದು 96%, ಸಾಧಾರಣ ಎಂದು 04% ರಷ್ಟು ತಿಳಿಸಿದ್ದಾರೆ. 96%ರಷ್ಟು ಹಾಲು ಉತ್ಪಾದಕರು ಡೈರಿಯ ಬಗ್ಗೆ ಉತ್ತಮ ಅಭಿಪ್ರಾಯ ಇಟ್ಟುಕೊಂಡಿರುವುದು ಡೈರಿ ಸಹಾಯ ಸಹಕಾರ ಸೌಲಭ್ಯ ಉತ್ತಮವಾಗಿದೆ ಎಲ್ಲರಿಗೂ ಲಭ್ಯವಿದೆ ಎನ್ನುವುದನ್ನು ತಿಳಿಸಿರುವುದನ್ನು ಅಧ್ಯಯನದಿಂದ ಕಾಣಬಹುದಾಗಿದೆ.

**ಹಾಲು ಉತ್ಪಾದಕರ ಹಸುಗಳಿಗಿರುವ ಖಾಯಿಲೆಗಳು**

ಪ್ರತಿಯೊಂದು ಜೀವಿಗೂ ಒಂದಲ್ಲ ಒಂದು ರೀತಿಯ ಖಾಯಿಲೆಗಳು ಬರುತ್ತಿರುತ್ತವೆ. ಕೆಲವೊಂದು ಋತುಮಾನಗಳಿಗೆ ಅನುಗುಣವಾಗಿ ಖಾಯಿಲೆಗಳು ಬರುತ್ತವೆ ಅವುಗಳನ್ನು ಪ್ರಾರಂಭದಲ್ಲಿ ನಾಟಿ ಔಷಧದಿಂದ ಗುಣಪಡಿಸುವ ಕೆಲಸವನ್ನು ಮಾಡುತ್ತಿದ್ದರು ನಂತರದ ದಿನಗಳಲ್ಲಿ ಪಶು ಆಸ್ಪತ್ರೆಗೆ ಹಸುಗಳನ್ನು ಕರೆದೊಯ್ಯುತ್ತಿರುವುದನ್ನು ಕಾಣಬಹುದು.

**ಕೋಷ್ಟಕ 7: ಹಸುಗಳಿಗಿರುವ ಖಾಯಿಲೆಗಳ ವಿವರ**

| ಖಾಯಿಲೆಗಳು | ಆವೃತ್ತಿ | ಶೇಕಡವಾರು |
|---|---|---|
| ಗೊರಸು | 10 | 20% |
| ಕಾಲು, ಬಾಯಿ ಜ್ವರ | 15 | 30% |
| ಕೆಚ್ಚಲು ಬಾವು | 25 | 50% |
| **ಒಟ್ಟು** | **50** | **100%** |

ಮೂಲ: ಕ್ಷೇತ್ರಕಾರ್ಯ

ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಹಾಲು ಉತ್ಪಾದಕರ ಹಸುಗಳಿಗಿರುವ ಖಾಯಿಲೆಗಳ ವಿವರವನ್ನು ನೋಡಿದಾಗ ಗೊರಸು ಖಾಯಿಲೆಯೆಂದು 20%, ಕಾಲು, ಬಾಯಿ ಜ್ವರ ಎಂದು 30%, ಕೆಚ್ಚಲು ಬಾವು ಎಂದು 50% ಇರುವುದು ಕಂಡುಬಂದಿದೆ. ಹಾಲು ಉತ್ಪಾದಕರ ಹಸುಗಳಿಗೆ ಬೇರೆಲ್ಲ ಖಾಯಿಲೆಗಳಿಗಿಂತ ಕೆಚ್ಚಲು ಬಾವು ಹೆಚ್ಚಾಗಿರುವುದನ್ನು ನೋಡಿದಾಗ ಹಾಲಿ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತದೆ ಮತ್ತು ಇಳುವರಿ ಕಡಿಮೆಯಾಗಿ ಆದಾಯದಲ್ಲಿ ಇಳಿಮುಖ ಉಂಟಾಗುತ್ತದೆ ಎನ್ನುವುದನ್ನು ಕಾಣಬಹುದಾಗಿದೆ.

**ಹಾಲು ಉತ್ಪಾದಕರ ಸಮಸ್ಯೆಗಳು**

ಹೈನುಗಾರಿಕೆ ಲಾಭದಾಯಕವಾಗಿ ಮುನ್ನೆಡೆಯುತ್ತಿದ್ದರೂ ಅದು ಹಲವಾರು ಸಮಸ್ಯೆಗಳಿಂದ ಕಂಡುಬರುತ್ತದೆ. ಪಶುಸಂಗೋಪನೆಯಲ್ಲಿ ತೊಡಗಿರುವವರಲ್ಲಿ ಬಹುತೇಕ ಸಣ್ಣ ರೈತರಾಗಿದ್ದಾರೆ. ಅವರು ಪಶುಸಂಗೋಪನೆಯನ್ನು ಉಪಕಸುಬನ್ನಾಗಿ ಅವಲಂಬಿಸಿದ್ದಾರೆ. ಅಲ್ಪ ಆದಾಯದಿಂದಲೇ ಹಸುಗಳಿಗೆ ಪೌಷ್ಟಿಕ ಆಹಾರವನ್ನು ನೀಡಿ ಸಾಕುವುದಕ್ಕೆ ಅವರಿಂದ ಸಾಧ್ಯವಾಗುತ್ತಿಲ್ಲ. ಇವರಲ್ಲಿ ಬಹುತೇಕ ಹಾಲು ಉತ್ಪಾದಕ ರೈತರಿಗೆ ವ್ಯವಸ್ಥಿತವಾದ ಕೊಟ್ಟಿಗೆ ಇರುವುದಿಲ್ಲ. ಹಸುಗಳ ಪೋಷಣೆಗೆ ಅಧಿಕ ವೆಚ್ಚ ಬೇಕು ಭಾರತದ ಹಸುಗಳಲ್ಲಿ ಹಾಲನ್ನು ನೀಡುವ ಸಾಮರ್ಥ್ಯ ಬಹಳ ಕಡಿಮೆ ಇದೆ. ಪ್ರತಿಯೊಂದು ಹಸುವು ಕಡಿಮೆ ಹಾಲನ್ನು ನೀಡುವುದರಿಂದ ಹೆಚ್ಚಿನ ಸಂಖ್ಯೆಯ ಹಸುಗಳನ್ನು ಪೋಷಿಸಬೇಕಾದ ಸಂದರ್ಭವಿರುತ್ತದೆ ಹಾಗಾಗಿ ಹಾಲಿನ ಉತ್ಪಾದನಾ ವೆಚ್ಚವು ಅಧಿಕವಾಗಿರುತ್ತದೆ. ಇವುಗಳಲ್ಲದೆ ಬೆಲೆ ನಿರ್ಧಾರದ ಸಮಸ್ಯೆಯು ಇದೆ. ಹಾಲು ಉತ್ಪಾದಕರ ಸಹಕಾರ ಮಹಾಮಂಡಳಿಗಳಲ್ಲಿ, ಒಕ್ಕೂಟಗಳಲ್ಲಿ ಮತ್ತು ತೆರೆದ ಮಾರುಕಟ್ಟೆಯಲ್ಲಿ ಬೆಲೆಯನ್ನು ಸರಿಯಾದ ರೀತಿಯಲ್ಲಿ ನಿರ್ಧಾರ ಮಾಡಲು ವಿಫಲವಾಗಿದೆ. ಬೆಲೆಗಳನ್ನು ಆಗಾಗ ಏರಿಳಿತ ಮಾಡಲಾಗುತ್ತದೆ ಆದ್ದರಿಂದ ಹಾಲು ಉತ್ಪಾದಕರಲ್ಲಿ ಅಸಮಧಾನ ಮೂಡುತ್ತದೆ.

**ಕೋಷ್ಟಕ 8: ಹಾಲು ಉತ್ಪಾದಕರ ಸಮಸ್ಯೆಗಳ ವಿವರ**

| ಸಮಸ್ಯೆಗಳು | ಆವೃತ್ತಿ | ಶೇಕಡವಾರು |
|---|---|---|
| ಪಶುಸಂಗೋಪನೆಯಲ್ಲಿ ತೊಂದರೆ | 15 | 30% |
| ಪೋಷಣೆಗೆ ಅಧಿಕ ವೆಚ್ಚ | 10 | 20% |
| ಬೆಲೆ ನಿರ್ಧಾರದ ಸಮಸ್ಯೆ | 25 | 50% |
| **ಒಟ್ಟು** | **50** | **100%** |

ಮೂಲ: ಕ್ಷೇತ್ರಕಾರ್ಯ

ಮೇಲಿನ ಕೋಷ್ಟಕದಿಂದ ತಿಳಿದುಬರುವುದೇನೆಂದರೆ ಹಾಲು ಉತ್ಪಾದಕರ ಸಮಸ್ಯೆಗಳನ್ನು ನೋಡಿದಾಗ ಪಶುಸಂಗೋಪನೆಯಲ್ಲಿ ತೊಂದರೆ ಎಂದು 30%,

ಪೋಷಣೆಗೆ ಅಧಿಕ ವೆಚ್ಚ ಎಂದು 20%, ಬೆಲೆ ನಿರ್ಧಾರದ ಸಮಸ್ಯೆ ಎಂದು 50% ರಷ್ಟು ಎಂದು ತಿಳಿಸಿರುವುದು ಅಧ್ಯಯನದಿಂದ ಕಂಡುಬಂದಿದೆ. ಹಾಲು ಉತ್ಪಾಕರಿಗೆ ಬೆಲೆ ನಿರ್ಧಾರದ ಸಮಸ್ಯೆ ಅಧಿಕವಾಗಿರುವುದು ಕಂಡುಬರುತ್ತದೆ.

**ಅಧ್ಯಯನದಿಂದ ಕಂಡುಬಂದ ಅಂಶಗಳು**

- ಹಾಲು ಉತ್ಪಾದನೆಯಲ್ಲಿ ತೊಡಗಿರುವವರಲ್ಲಿ ಮಧ್ಯ ವಯಸ್ಸಿನವರು ಹೆಚ್ಚಾಗಿದ್ದಾರೆ.
- ಹಾಲು ಉತ್ಪಾದನೆಯನ್ನು ಉಪ ಕಸುಬನ್ನಾಗಿ ನಡೆಸುತ್ತಿದ್ದಾರೆ.
- ಕಡಿಮೆ ಜಮೀನನ್ನು ಹೊಂದಿರುವವರಾಗಿದ್ದಾರೆ.
- ಹಾಲು ಉತ್ಪಾದನೆಯ ಜೊತೆಗೆ ಕೃಷಿಯನ್ನು ಆದಾಯದ ಮೂಲವನ್ನಾಗಿಸಿಕೊಂಡಿದ್ದಾರೆ.
- ಹಾಲು ಉತ್ಪಾದಕರ ವಾರ್ಷಿಕ ಆದಾಯ ಸಾಧಾರಣವಾಗಿದೆ.

**ಅಧ್ಯಯನದ ಸಲಹೆಗಳು**

- ಹಸುಗಳ ಪೋಷಣ ವೆಚ್ಚ ಇತ್ತೀಚಿನ ದಿನಗಳಲ್ಲಿ ದುಬಾರಿಯಾಗಿದ್ದು, ಹಾಲಿನ ದರ ಕಡಿಮೆಯಾಗಿದ್ದು ಖರ್ಚು ಹೆಚ್ಚಾಗುತ್ತಿದೆ ಹಾಗಾಗಿ ಹಾಲಿನ ದರವನ್ನು ಹೆಚ್ಚಿಸಬೇಕು.
- ಹಸುಗಳಿಗೆ ಒಕ್ಕೂಟಗಳಿಂದ ನೀಡುವ ಉಚಿತ ಆರೋಗ್ಯ ಸೌಲಭ್ಯಗಳ ಮಾಹಿತಿ ಅರಿವಿನ ಕಾರ್ಯಕ್ರಮಗಳು ಘಟಕಗಳ ಮೂಲಕ ಇನ್ನೂ ಹೆಚ್ಚಿಗೆ ಆಗಬೇಕು.
- ಹಾಲು ಉತ್ಪಾದಕ ಘಟಕಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಉತ್ತೇಜಿಸಬೇಕಾಗಿದೆ.
- ಹಾಲು ಉತ್ಪಾದಕ ಘಟಕಗಳ ಮೂಲಕ ಬ್ಯಾಂಕ್‌ಗಳ ಬಳಕೆ ಮತ್ತು ವ್ಯವಹಾರಗಳ ಕುರಿತು ಘಟಕವು ಇನ್ನೂ ಹೆಚ್ಚಿನ ಮಾಹಿತಿ ನೀಡಬೇಕಿದೆ.
- ಹಸುಗಳು ಅನಾರೋಗ್ಯದಿಂದ ಆಕಸ್ಮಿಕ ಮರಣ ಹೊಂದಿದರೆ ತ್ವರಿತವಾಗಿ ಪರಿಹಾರ ನೀಡಬೇಕು.
- ಹಾಲು ಉತ್ಪಾದಕರಿಗೆ ಆಗಿಂದಾಗ್ಗೆ ಒಕ್ಕೂಟಗಳ ಸ್ವಚ್ಛತೆ, ನೀರಿನ ಸದ್ಬಳಕೆ, ಪರಿಸರ ಸಂರಕ್ಷಣೆ ಮುಂತಾದವುಗಳ ತಿಳಿಸುವುದು ಮುಖ್ಯ.

**ಉಪಸಂಹಾರ**

ಹಾಲು ಉತ್ಪಾದನೆಯು ಕೃಷಿ ಸಂಬಂಧಿತ ಚಟುವಟಿಕೆಯಾಗಿದ್ದು, ಅನೇಕ ಕುಟುಂಬಗಳು ತಮ್ಮ ಜೀವನಾವಶ್ಯಕ ಉಪಕಸುಬನ್ನಾಗಿ ಮಾಡಿಕೊಂಡಿದ್ದಾರೆ. ತಮ್ಮ ಜೀವನ ನಿರ್ವಹಣೆ ಜೊತೆಗೆ ತಮ್ಮ ಕುಟುಂಬದ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳುವ ಪ್ರಯತ್ನದಲ್ಲಿ ಮುಂದುವರೆಯುತ್ತಾರೆ. ಪ್ರಸ್ತುತ ಹಸುಗಳ ಖಾಯಿಲೆಗಳು ಆಯಾ ಪ್ರದೇಶದ ಹವಾಗುಣದ ಆದಾರದ ಮೇಲೆ ಬರುವುದು ಇದೆ ಇಂತಹ ಪರಿಸ್ಥಿತಿಗಳಲ್ಲಿ ಹಸುಗಳನ್ನು ಸಾಕಿಕೊಂಡು ಅವುಗಳ ಪೋಷಣೆ ಮಾಡಿಕೊಂಡು ತಮ್ಮ ಜೀವನದ ಒಂದು ಭಾಗವಾಗಿ ಹಾಲು ಉತ್ಪಾದನೆಯನ್ನು ಮಾಡುತ್ತಿದ್ದಾರೆ. ಇದರಿಂದ ತಮ್ಮ ಕುಟುಂಬದ ನಿರ್ವಹಣೆ ಮಾಡುವವರು ಇದ್ದಾರೆ ಸರ್ಕಾರ ಇವರಿಗೆ ಒಂದು ಬೆಂಬಲ ಬೆಲೆಯನ್ನು ನೀಡಬೇಕು ಎನ್ನುವುದು ಹಾಲು ಉತ್ಪಾದಕರ ಒಂದು ಆಶಯವಾಗಿದೆ.

**ಆಧಾರ ಗ್ರಂಥಗಳು**


- ಕೃಷ್ಣಯ್ಯಗೌಡ ಹೆಚ್ ಆರ್. (2018). ಭಾರತೀಯ ಅರ್ಥಶಾಸ್ತ್ರ, ಮೈಸೂರು ಬುಕ್ ಹೌಸ್, ಮೈಸೂರು.
- ಜಾನ್ ಡಿಸೋಜ. (2018, ಜುಲೈ 17). ಹೈನು ಪಲನೆಯಲ್ಲಿ ನೆಮ್ಮದಿ. ವಿಜಯಕರ್ನಾಟಕ ದಿನಪತ್ರಿಕೆ,

  https://vijaykarnataka.com/lavalavk/agri/animal-husbandry-by-raviraj-shetty-in-kundapur/articleshow/65010030.cms
- Patil, P. V., & Patil, M. K. (2020). *Milk Production Management* (1st ed.). CRC Press.
- Raheem, A. A. (2012). *Women Empowerment and Sustainable Rural Development in India: An Experience of Women Self Help Group Members*. LAP LAMBERT Academic Publishing.
- Rao, M. (2018). Spirit of Make in India for Rural Prosperity through Dairying in Telangana. *Concepts of Dairy & Veterinary Sciences*, *1*(4).
- Sah, A. K. (2005). *Entrepreneurship Among Milk Producers in Northern Region of India*. NDRI.
- Suraj M. Popker, & Guntur Anjana Raju. (2014). Socio-Economic Status of Milk Producers of Primary Milk Societies: A Case Study. *Think India*, *17*(1), 8–18. https://doi.org/10.26643/think-india.v17i1.7812